ದೂರವಾಣಿ: 0836–2215328 Phone : 0836-2215328

**ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ**

KARNATAK UNIVERSITY, DHARWAD

**Scholarship Section**

***Email : scholarship@kud.ac.in***

ನಂ:ಕವಿವಿ/ಶಿವೇ/2024/941 ದಿನಾಂಕ: 23–01–2024

**<u>–:ಸುತ್ತೋಲೆ:–</u>**

**ವಿಷಯ: ಸನ್ 2023–24 ನೇ ಸಾಲಿಗೆ ಶ್ರೀ ಎಸ್ ನಿಜಲಿಂಗಪ್ಪ ನಿಧಿ ಶಿಷ್ಯವೇತನ ಅರ್ಜಿ ಆಹ್ವಾನಿಸಿದ ಕುರಿತು.**
**ಉಲ್ಲೇಖ: ಕುಲಪತಿಗಳ ಆದೇಶ ದಿನಾಂಕ: 12–01–2024**

*******

ಸನ್ 2023–24 ನೇ ಸಾಲಿನಲ್ಲಿ ಸ್ನಾತಕ ಪದವಿಯ ವಿವಿಧ ಕೋರ್ಸುಗಳಿಗೆ ಅಧ್ಯಯನ ಮಾಡುತ್ತಿರುವ (ಹಳೆಯ) ಮುಂಬೈ ಕರ್ನಾಟಕದ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಮಕ್ಕಳಿಗೆ (ಕಲಾ, ವಾಣಿಜ್ಯ, ಮತ್ತು ವಿಜ್ಞಾನ ಪದವಿಯನ್ನು ಕರ್ನಾಟಕ ವಿಶ್ವವಿದ್ಯಾಲಯದ ಅದೀನ/ಸಂಯೋಜಿತ ಮಹಾವಿದ್ಯಾಲಯದಲ್ಲಿ ಓದುತ್ತಿರುವ ಹಾಗೂ ತಾಂತ್ರಿಕ, ವೈದ್ಯಕೀಯ, ಆಯುರ್ವೇದ ಪದವಿಯನ್ನು ಕರ್ನಾಟಕ ರಾಜ್ಯದ ಯಾವುದೇ ವಿಶ್ವವಿದ್ಯಾಲಯದಲ್ಲಿ ಓದುತ್ತಿರುವ) ಪ್ರತಿಭೆಯ ಆಧಾರದ ಮೇರೆಗೆ ಈ ಕೆಳಗೆ ಹೇಳಿದಂತೆ ಶ್ರೀ ಎಸ್. ನಿಜಲಿಂಗಪ್ಪ ನಿಧಿ ಶಿಷ್ಯವೇತನವನ್ನು ಪ್ರದಾನ ಮಾಡುವ ಸೌಲಭ್ಯದ ಕುರಿತು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕಾರಣ ಸಂಬಂಧಪಟ್ಟವರ ಗಮನಕ್ಕೆ ತರಲು ಕೋರಲಾಗಿದೆ.

ಮುಂಬೈ ಕರ್ನಾಟಕ ಜಿಲ್ಲೆಗಳ ವ್ಯಾಪ್ತಿಯ ಧಾರವಾಡ, ಹಾವೇರಿ, ಗದಗ, ಕಾರವಾರ, ಬೆಳಗಾವಿ, ಬಾಗಲಕೋಟ ಹಾಗೂ ಬಿಜಾಪೂರ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಮಕ್ಕಳು ಈ ಶಿಷ್ಯವೇತನಕ್ಕೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. (ಕರಾರು 1 (ಅ) ಮತ್ತು (ಬ) ದಂತೆ)

| ಅ.ನಂ. | ನಿಖಾಯ | ಶಿಷ್ಯವೇತನ ಸಂಖ್ಯೆ | ಶಿಷ್ಯವೇತನ ಅವಧಿ |
|---|---|---|---|
| 1. | ಕಲಾ | 21 (ಪ್ರತಿ ಜಿಲ್ಲೆಗೆ 3 ರಂತೆ) | 3 ವರ್ಷಗಳು (ಪ್ರತಿ ವರ್ಷಕ್ಕೆ 10 ತಿಂಗಳು ಮಾತ್ರ) |
| 2. | ವಿಜ್ಞಾನ | 21 (ಪ್ರತಿ ಜಿಲ್ಲೆಗೆ 3 ರಂತೆ) | 3 ವರ್ಷಗಳು (ಪ್ರತಿ ವರ್ಷಕ್ಕೆ 10 ತಿಂಗಳು ಮಾತ್ರ) |
| 3. | ವಾಣಿಜ್ಯ | 21 (ಪ್ರತಿ ಜಿಲ್ಲೆಗೆ 3 ರಂತೆ) | 3 ವರ್ಷಗಳು (ಪ್ರತಿ ವರ್ಷಕ್ಕೆ 10 ತಿಂಗಳು ಮಾತ್ರ) |
| 4. | ತಾಂತ್ರಿಕ | 14 (ಪ್ರತಿ ಜಿಲ್ಲೆಗೆ 2 ರಂತೆ) | 4 ವರ್ಷಗಳು (ಪ್ರತಿ ವರ್ಷಕ್ಕೆ 10 ತಿಂಗಳು ಮಾತ್ರ) (ಆರ್ಕಿಟೆಕ್ಚರ ಮಾತ್ರ 5 ವರ್ಷಗಳು) |
| 5. | ವೈದ್ಯಕೀಯ | 07 (ಪ್ರತಿ ಜಿಲ್ಲೆಗೆ 1 ರಂತೆ) | 4 ವರ್ಷ 6 ತಿಂಗಳವರೆಗೆ (ಪ್ರತಿ ವರ್ಷಕ್ಕೆ 10 ತಿಂಗಳು ಮಾತ್ರ) |
| 6. | ಆಯುರ್ವೇದ | 07 (ಪ್ರತಿ ಜಿಲ್ಲೆಗೆ 1 ರಂತೆ) | 4 ವರ್ಷ 6 ತಿಂಗಳವರೆಗೆ (ಪ್ರತಿ ವರ್ಷಕ್ಕೆ 10 ತಿಂಗಳು ಮಾತ್ರ) |

**Contd. ..೨**

**ಕರಾರುಗಳು:-**

1. ಮುಂಬೈ ಕರ್ನಾಟಕದ ಪ್ರಾಥಮಿಕ ಶಾಲಾ ಶಿಕ್ಷಕರ ಮಕ್ಕಳು ಮಾರ್ಚ-2023 ರಲ್ಲಿ ಪಿಯುಸಿ (ಕಲಾ/ವಾಣಿಜ್ಯ/ವಿಜ್ಞಾನ) ದ್ವಿತೀಯ ವರ್ಗದ ಪರೀಕ್ಷೆಯನ್ನು ಪ್ರಥಮ ಪ್ರಯತ್ನದಲ್ಲಿ (1$^{st}$ attempt) ಪಾಸಾಗಿ 2023-24ನೇ ಸಾಲಿನಲ್ಲಿ ಈ ಕೆಳಗಿನಂತೆ ಓದುತ್ತಿರಬೇಕು.

ಅ) ಕರ್ನಾಟಕ ವಿಶ್ವವಿದ್ಯಾಲಯದ ಸಂಯೋಜಿತ ಯಾವುದೇ ಮಹಾವಿದ್ಯಾಲಯಗಳಲ್ಲಿ (ಕ.ವಿ.ವಿ. ಸಂಯೋಜನಾ ವ್ಯಾಪ್ತಿಗೆ ಒಳಪಡುವ ಜಿಲ್ಲೆಗಳು: ಧಾರವಾಡ, ಗದಗ, ಹಾವೇರಿ ಹಾಗೂ ಕಾರವಾರ) ಕಲಾ ವಾಣಿಜ್ಯ ಮತ್ತು ವಿಜ್ಞಾನ ವಿಷಯಗಳಲ್ಲಿ (ನಿಖಾಯ) ಪದವಿ ವರ್ಗಕ್ಕೆ ಪ್ರವೇಶ ಪಡೆದು ಓದುತ್ತಿರಬೇಕು.

ಬ) ಕರ್ನಾಟಕ ರಾಜ್ಯದ ವೈದ್ಯಕೀಯ/ತಾಂತ್ರಿಕ ವಿಶ್ವವಿದ್ಯಾಲಯಗಳ ಅಧೀನದಲ್ಲಿ ಬರುವ ವಿವಿಧ ವೈದ್ಯಕೀಯ/ತಾಂತ್ರಿಕ ಮಹಾವಿದ್ಯಾಲಯಗಳಲ್ಲಿ ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ವೈದ್ಯಕೀಯ ಪದವಿ / ತಾಂತ್ರಿಕ ಪದವಿಗಳಲ್ಲಿ ಪ್ರವೇಶ ಪಡೆದು ಓದುತ್ತಿರಬೇಕು. (ವೈದ್ಯಕೀಯ ಪದವಿಗಳಲ್ಲಿ ಎಂ.ಬಿ.ಬಿ.ಎಸ್. ಮತ್ತು ಬಿ.ಎ.ಎಂ.ಎಸ್. ಪದವಿಗಳೆಂದು ಪರಿಗಣಿಸತಕ್ಕದ್ದು).

2. ಈ ಶಿಷ್ಯವೇತನಗಳನ್ನು ಸ್ನಾತಕ ಪದವಿಯ ಪ್ರಥಮ ವರ್ಷದಿಂದ (ಪಿ.ಯು.ಸಿ ದ್ವಿತಿಯ ವರ್ಷದ ಅಂಕಪಟ್ಟಿ ಪರಿಶೀಲಿಸಿ) ನೀಡಲಾಗುವದು ಮತ್ತು ವಿದ್ಯಾರ್ಥಿ/ ವಿದ್ಯಾರ್ಥಿನಿಯರ ತೃಪ್ತಿಕರವಾದ ಅಧ್ಯಯನವನ್ನು ಪರಿಗಣಿಸಿ ವರ್ಷದಿಂದ ವರ್ಷಕ್ಕೆ (ಗೊತ್ತುಪಡಿಸಿದ ಅವಧಿಗೆ) ವಿಸ್ತರಿಸಿ ಪಾವತಿಸುವ ಕ್ರಮ ಜರುಗಿಸಲಾಗುವದು.

3. ಅರ್ಜಿ:-

(ಅ) ಈ ಪ್ರಕಟಣೆಯೊಂದಿಗೆ ಲಗತ್ತಿಸಿದ ಅರ್ಜಿ ನಮೂನೆಯಲ್ಲಿಯೇ ಮಾಹಿತಿ ತುಂಬಿ, ಪ್ರಾಚಾರ್ಯರ ಮುಖಾಂತರ ಸಲ್ಲಿಸತಕ್ಕದ್ದು.

(ಬ) ಅರ್ಜಿಯನ್ನು ದಿನಾಂಕ: 24-02-2024 ರೊಳಗಾಗಿ ಶಿಷ್ಯವೇತನ ವಿಭಾಗ, ಕ.ವಿ.ವಿ. ಧಾರವಾಡಕ್ಕೆ ಸಲ್ಲಿಸತಕ್ಕದ್ದು.

(ಕ) ಅರ್ಜಿ ಜೊತೆಗೆ ಕೇಳಲಾದ ಎಲ್ಲ ದಾಖಲಾತಿಗಳನ್ನು ಅಗತ್ಯವಾಗಿ ಲಗತ್ತಿಸತಕ್ಕದ್ದು.(ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವದಿಲ್ಲ ಮತ್ತು ಈ ದಿಸೆಯಲ್ಲಿ ಪತ್ರ ವ್ಯವಹಾರಕ್ಕೆ ಅವಕಾಶವಿಲ್ಲ.)

(ಡ) ಅರ್ಹತೆಯ ಆಧಾರದ ಮೇಲೆ ಶಿಷ್ಯವೇತನ ಮಂಜೂರಾತಿ ಮಾಡಲಾಗುವುದು. ಅರ್ಜಿ ನಮೂನೆಯನ್ನು (Application form) ವಿಶ್ವವಿದ್ಯಾಲಯದ ಅಂತರ್ಜಾಲ www.kud.ac.in ನಲ್ಲಿ ಪಡೆಯಬಹುದು. ಕಾರಣ, ಸಂಬಂಧಿಸಿದ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯಬೇಕೆಂದು ತಿಳಿಯಪಡಿಸಲಾಗಿದೆ.

Sd/-
ಕುಲಸಚಿವರು

ಪ್ರತಿ:- ಸಾದರಪೂರ್ವಕವಾಗಿ ಮಾಹಿತಿಗಾಗಿ:-

1) ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ. 1) ಧಾರವಾಡ (2) ಬೆಳಗಾವಿ (3) ವಿಜಯಪೂರ (4) ಬಾಗಲಕೋಟ (5) ಗದಗ (6) ಹಾವೇರಿ(7) ಕಾರವಾರ (ಎನ್.ಕೆ.) ಇವರಿಗೆ ಮಾಹಿತಿಗಾಗಿ ಹಾಗೂ ಈ ವಿಷಯವನ್ನು ತಮ್ಮ ಅಧೀನದಲ್ಲಿ ಬರುವ ಎಲ್ಲ ಪ್ರಾಥಮಿಕ ಶಾಲಾ ಶಿಕ್ಷಕರ ಗಮನಕ್ಕೆ ತರಲು ವಿನಂತಿಯೊಂದಿಗೆ ರವಾನಿಸಲಾಗಿದೆ.
2) ಅಧ್ಯಕ್ಷರು, ಧಾರವಾಡ ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಸ್ಥೆ ಪೊ/ಮು: ಅಮರಗೋಳ ತಾ: ಹುಬ್ಬಳ್ಳಿ ಜಿಲ್ಲಾ: ಧಾರವಾಡ.
3) ಅಧ್ಯಕ್ಷರು, ಕಾರವಾರ ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಪೊ/ಮು: ಹಳಿಯಾಳ (ಎನ್.ಕೆ.)
4) ಅ) ಕುಲಸಚಿವರು, ರಾಜೀವ ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯ, ಬೆಂಗಳೂರು.
   ಬ) ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.
5) ಉಪನಿರ್ದೇಶಕರ ಕಾರ್ಯಾಲಯ ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.

ಪ್ರತಿ ಮಾಹಿತಿಗಾಗಿ:-

01. ವಿತ್ತಾಧಿಕಾರಿಗಳು, ಕ.ವಿ.ವಿ. ಧಾರವಾಡ
02. ನಿರ್ದೇಶಕರು, ಐಟಿ ವಿಭಾಗ, ಕ.ವಿ.ವಿ. ಧಾರವಾಡ

ಸುದ್ದಿ ಮಾಧ್ಯಮದಡಿ ಪ್ರಕಟಣೆಯ ಕೃಪೆಗಾಗಿ:

ಮಾನ್ಯ ಸಂಪಾದಕರು, ಸಂಯುಕ್ತ ಕರ್ನಾಟಕ, ವಿಜಯ ಕರ್ನಾಟಕ, ಪ್ರಜಾವಾಣಿ, ಕನ್ನಡಮ್ಮ ಇಂಡಿಯನ್ ಎಕ್ಸಪ್ರೆಸ್, ಡೆಕ್ಕನ್ ಹೇರಾಲ್ಡ ಜನಪ್ರಿಯ ದಿನ ಪತ್ರಿಕೆಗಳು.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

# ಶ್ರೀ ಎಸ್. ನಿಜಲಿಂಗಪ್ಪ ನಿಧಿ ಶಿಷ್ಯವೇತನ – ಅರ್ಜಿ

(ಟಿಪ್ಪಣೆ:–ಧಾರವಾಡ, ಕಾರವಾರ, ಗದಗ, ಹಾವೇರಿ ಜಿಲ್ಲೆಯ ಪ್ರಾಥಮಿಕ ಶಾಲಾ ಶಿಕ್ಷಕರ ಮಕ್ಕಳು ಮಾತ್ರ ಈ ಅರ್ಜಿಯನ್ನು ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಸಲ್ಲಿಸತಕ್ಕದ್ದು)

1. ಪೂರ್ಣ ಹೆಸರು:______________________________
(ಅಂಕ ಪಟ್ಟಿಯಲ್ಲಿ ಇದ್ದಂತೆ)

2. ಪಿಯುಸಿ ದ್ವಿತೀಯ./ಪಾಸಾದ ವರ್ಷ:__________ 3. ಪರೀಕ್ಷಾ ಸ್ಥಳಾಂಕ:______________
(ದೃಢೀಕೃತ ಅಂಕಪಟ್ಟಿ ಲಗತ್ತಿಸಬೇಕು)

4. ಪಡೆದ ಅಂಕಗಳು:________ 5. ಪಾಸಾಗಲು ತೆಗೆದುಕೊಂಡ ಅವೃತಗಳು (Attempt) :_________

6. ಪಿಯುಸಿ ಓದಿದ ಮಹಾವಿದ್ಯಾಲಯ:______________________________

7. ಸಂಪರ್ಕಿಸಬೇಕಾದ ವಿಳಾಸ:______________________________
______________________________

Pin code. ____________________ (Mob No.) ____________________

8. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಓದುತ್ತಿರುವ ಪದವಿ ವರ್ಗ:______________________________

9. ಓದುತ್ತಿರುವ ಮಹಾವಿದ್ಯಾಲಯ ಹೆಸರು:______________________________

ನನಗೆ ಸಂಬಂಧಿಸಿದ ಮೇಲ್ಕಾಣಿಸಿದ ಮಾಹಿತಿಗಳೆಲ್ಲ ನನ್ನ ತಿಳುವಳಿಕೆ ಪ್ರಕಾರ ನಿಜವಾಗಿಯೂ ಸರಿ ಇರುತ್ತದೆ.

ಸ್ಥಳ:
ದಿನಾಂಕ: (ಅರ್ಜಿದಾರನ ಸಹಿ)

## ಮಹಾವಿದ್ಯಾಲಯದ ಕಾರ್ಯಾಲಯದ ಉಪಯೋಗಕ್ಕಾಗಿ

ಮಹಾವಿದ್ಯಾಲಯದ ಹೆಸರು ಮತ್ತು ವಿಳಾಸ:______________________________

ಶ್ರೀ/ಶ್ರೀಮತಿ:______________________________
ಇವರು ಪ್ರಸ್ತುತ ವರ್ಷದಲ್ಲಿ______________ ಪದವಿಯ ಪ್ರಥಮ ವರ್ಷದ ತರಗತಿಗೆ ಪ್ರವೇಶ ಪಡೆದು ಓದುತ್ತಿದ್ದಾನೆ/ಳೆ. ಅವನ/ಅವಳ ಅಭಿವೃದ್ಧಿ ನಡತೆ ಮತ್ತು ಹಾಜರಾತಿ ಈ ಕೆಳಗಿನಂತೆ ಇರುತ್ತದೆ.

1. ವಿದ್ಯಾರ್ಥಿಯ ನಡತೆ:______________ 2. ಅಭಿವೃದ್ಧಿ:______________
3. ಹಾಜರಾತಿ:______________

ಸ್ಥಳ: (ಪ್ರಾಚಾರ್ಯರ ಸಹಿ ಹಾಗೂ
ದಿನಾಂಕ: ಮಹಾವಿದ್ಯಾಲಯದ ಸೀಲು)

P.T.O..

## ಪ್ರಾಥಮಿಕ ಶಾಲಾ ಮುಖ್ಯಸ್ಥರ ಪ್ರಮಾಣ ಪತ್ರ

(ಶ್ರೀ ಎಸ್. ನಿಜಲಿಂಗಪ್ಪ ನಿಧಿ ಶಿಷ್ಯವೇತನಕ್ಕಾಗಿ ಅರ್ಜಿ ಸಲ್ಲಿಸುವ ವಿದ್ಯಾರ್ಥಿಯ ಪಾಲಕರ ಅಂದರೆ ಪ್ರಾಥಮಿಕ ಶಾಲಾ ಶಿಕ್ಷಕರಿರುವ ತಂದೆ ಅಥವಾ ತಾಯಿಯ ವಿವರಗಳು)

1. ಪೂರ್ಣ ಹೆಸರು:______________________________

2. ಕಾರ್ಯನಿರ್ವಹಿಸುತ್ತಿರುವ______________________________
   ಪ್ರಾಥಮಿಕ ಶಾಲೆ

3. ಪ್ರಾಥಮಿಕ ಶಾಲೆಯು ಯಾವ ಆಡಳಿತಕ್ಕೊಳಪಟ್ಟಿರುತ್ತದೆ (ಗುರುತು ಹಾಕುವದು)
   (ಅ) ಪೌರಾಡಳಿತ: ______________ (ಆ) ಮನ್ನಣೆ ಪಡೆದದ್ದು:______________

   (ಇ) ಮನ್ನಣೆ ಪಡೆಯಲಾರದ್ದು__________ (ಈ) ಸರಕಾರಿ:______________

ಸ್ಥಳ: ಮುಖ್ಯಗುರುಗಳ ಸಹಿ
ದಿನಾಂಕ: ಹಾಗೂ ಸೀಲು

## ಕ್ಷೇತ್ರ ಶಿಕ್ಷಣಾಧಿಕಾರಿಗಳ ಪ್ರಮಾಣ ಪತ್ರ

(ಅರ್ಜಿದಾರ ವಿದ್ಯಾರ್ಥಿಯ ತಂದೆ / ತಾಯಿ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಥಮಿಕ ಶಾಲೆಗೆ ಸಂಬಂಧಿಸಿದ ತಾಲೂಕಿನ ಶಿಕ್ಷಣಾಧಿಕಾರಿಗಳ ಪ್ರಮಾಣ ಪತ್ರ)

ಶ್ರೀ/ಶ್ರೀಮತಿ: (ವಿದ್ಯಾರ್ಥಿ ಹೆಸರು)______________________________
ಇವರು____________ ಊರಿನಲ್ಲಿ____________ ತಾಲೂಕಿನಲ್ಲಿ______________
ಜಿಲ್ಲೆಯಲ್ಲಿ:____________ ಸರಕಾರಿ/ಪೌರಾಡಳಿತ/ಅನುದಾನಿತ/ಅನುದಾನ ರಹಿತ/ಪ್ರಾಥಮಿಕ ಶಾಲೆಯಲ್ಲಿ
ಶಿಕ್ಷಕರಾಗಿರುವ ಶ್ರೀ/ಶ್ರೀಮತಿ______________________________
ಇವರ ಮಗನು/ಮಗಳು ಇರುತ್ತಾರೆ ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ.

ಸ್ಥಳ: ಸಹಾಯಕ ಶಿಕ್ಷಣಾಧಿಕಾರಿಗಳ
ದಿನಾಂಕ: ಸಹಿ ಹಾಗೂ ಸೀಲು